(*b*) An estimate for Rs. 12·40 lakhs for the electrification of Hosadurga, Holalkere, Janakal, Begur and Areballihatti has been sanctioned.

(*c*) The estimate contemplates the tapping of the line from Chitaldrug and extending it to Hosadurga *via* Janakal and Begur. This line will be tapped off at a suitable point and extended up to Areballihatti *via* Holalkere.

(*d*) No.

ಶ್ರೀ ಜಿ. ಬಸಪ್ಪನವರು.—ಉತ್ತರದಲ್ಲಿ ಬೇಗೂರು ಎಂದು ಕೊಡರಾಗಿದೆ. ಬೇಗೂರು ಎಂಬುದು ಅಲ್ಲ ಯಾವುದೂ ಇಲ್ಲವಲ್ಲಾ!

ಶ್ರೀ ಟಿ. ಸಿದ್ದಲಿಂಗಯ್ಯನವರು.—ವಿಚಾರ ಮಾಡಿ ಹೇಳುತ್ತೇನೆ.

Mr. SPEAKER.—It is a spelling mistake I think. ಬಾಗೂರು ಎಂಬುದಕ್ಕೆ ಬದಲಾಗಿ ಬೇಗೂರು ಎಂದು ಬಿದ್ದಿರಬಹುದು.

ಶ್ರೀ ಜಿ. ಬಸಪ್ಪನವರು.—ಹೊಸದುರ್ಗ, ಜಾನಕಲ್ಲು ಮಾರ್ಗದ ಮಧ್ಯೆ ಬಾಗೂರು ಇದೆಯಲ್ಲವೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಡಿ ಹೇಳಬೇಕು.

ಶ್ರೀ ಜಿ. ಬಸಪ್ಪನವರು.—ಆ ಲೈನು ನೇರವಾಗಿ ಜಾನಕಲ್ಲಿನಿಂದ ಹೊಸದುರ್ಗಕ್ಕೆ ಬರುತ್ತದೆಯೆ ಅಥವಾ ಬೇರೆ ಮಾರ್ಗವಾಗಿ ಹೋಗುತ್ತದೆಯೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದರಲ್ಲಿ ಯಾವುದಾದರೂ ತಪ್ಪಾಗಿದ್ದು ಸರಿಪಡಿಸಬೇಕೆಂದು ಹೇಳಿದರೆ ಸರಿಪಡಿಸುತ್ತೇವೆ. ಗೊತ್ತಿರುವಂತೆ ಬಾಗೂರು ಎಂಬುದು ಹೊಸದುರ್ಗ ಮತ್ತು ಹೊಳಲ್ಕೆರೆ ಮಧ್ಯೆ ಇದೆ ಎಂದು ರಿಕಾರ್ಡಿನಲ್ಲಿ ನಮೂದಾಗಿದೆ.

ಶ್ರೀ ಜಿ. ಬಸಪ್ಪನವರು.—ಅಲ್ಲ ಬೇರೆ ಯಾವುದಾದರೂ ಗ್ರಾಮಸ್ಥರಿಂದ ಎದ್ಯುಚ್ಛೈಕ್ಕೆ ಒದಗಿಸಬೇಕೆಂದು ಅರ್ಜಿ ಬಂದಿದೆಯೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬಂದಿದೆ.

ಶ್ರೀ ಜಿ. ಬಸಪ್ಪನವರು.—ಆದ್ದರಿಂದ ಆ ಜಾನಕರ್ ಮಾರ್ಗವನ್ನು ಬದಲಾವಣೆ ಮಾಡಬೇಕೆ ಆಲೋಚನೆ ಮಾಡಿದ್ದೀರಾ?

Mr. SPEAKER.—It is answered in (*d*).

ಶ್ರೀ ಎ. ಭೀಮಪ್ಪನಾಯಕರು (ಮೊಳಕಾಲ್ಮೂರು).—ಶಿವಗಂಗೆ ಹಳ್ಳಿಯಿಂದ ಟ್ಯಾಪ್ ಮಾಡಿ, ತಾಳ್ಯ, ಜಾನಕಲ್ ಮಾರ್ಗವಾಗಿ ಹೊಸದುರ್ಗಕ್ಕೆ ಲೈನು ಹಾಕಬೇಕೆಂದಲ್ಲವೇ ಈಗ ಮಂಜೂರಾಗಿರುವುದು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೌದು.

ಶ್ರೀ ಎ. ಭೀಮಪ್ಪನಾಯಕರು.—ಆದ್ದರಿಂದ ಈಗ ಅದೇ ಲೈನ್‌ನಲ್ಲೇ ಮಾಡುವುದರಿಂದ ಚೇಪರ್ ಆಗುತ್ತದೆ ಎಂದು ಇರಾಖೆಯವರು ಹೇಳಿದ್ದಾರಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು. ಚೀಪರ್ ಆದ್ದರಿಂದಲೇ ಆ ಲೈನ್‌ನಲ್ಲಿ ಹಾಕಬೇಕೆಂದು ಮಾಡಿದ್ದಾರೆ.

Sri A. BHEEMAPPA NAIK.—Will that line alone be continued or will there be any change?

Mr. SPEAKER.—It has been answered.

Sri A. BHEEMAPPA NAIK.—That is not the line. The line sanctioned is Sivaganga, Thalya, Janakal and Hosadurga.

ಈಗ ನಾರಾಯಣಗೊಂಡಹಳ್ಳಿ ಮುಂತಾದ ಕಡೆಗಳಿಂದ ಅರಿಕೆಗಳು ಬಂದು ಅಂದಾಜು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ. ಅದು ಬಹಳ ನಿಧಾನವಾಗುತ್ತದೆ ಎಂಬ ಅಭಿಪ್ರಾಯವಿದೆ. ಆದ್ದರಿಂದ.....

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅರಿಕೆ ಬಂದಿದೆ. ಇರತಕ್ಕ ಅನುಕೂಲ ಅನಾನುಕೂಲಗಳನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎ. ಭೀಮಪ್ಪನಾಯಕರು.—ಈಗ ಮಂಜೂರಾಗಿರುವಂತೆ ಮುಂದುವರಿಸುತ್ತಿರಾ? ಅಥವಾ ಹೊಸದು ಮಂಜೂರಾಗುವ ವರೆಗೂ ನಿಲ್ಲಿಸುತ್ತಿರಾ?

Sri T. SIDDALINGAIYA.—I have answered. I will answer again.

ಅರಿಕೆ ಸಹ ಬಂದಿದೆ. ಈಗ ಡೀಪಿಯೇಟ್ ಮಾಡುವುದರಿಂದ ಇನ್ನೂ 5 ಹಳ್ಳಿಗಳಿಗೆ ಸುಲಭ ಖರ್ಚಿನಲ್ಲಿ ವಿದ್ಯುಚ್ಛೈಕ್ಕೆ ಕೊಡಬಹುದು ಎಂಬ ಅಭಿಪ್ರಾಯವಿದೆ. ಆದ್ದರಿಂದ ಡೀಪಿಯೇಟ್ ಮಾಡಬೇಕೇ ಅಥವಾ ಇಲ್ಲಿ ಮೊದಲಿನ ಪ್ಲಾನ್‌ನಂತೆ ವಿಂದುವರಿಸಬೇಕೇ ಎಂಬುದನ್ನು ತೀರ್ಮಾನ ಮಾಡಿಲ್ಲ.

ಶ್ರೀ ಎ. ಭೀಮಪ್ಪನಾಯಕರು.—ಶಿವಗಂಗೆ ಲೈನ್ ಡೀಪಿಯೇಟ್ ಮಾಡಿದರೆ ಎಷ್ಟು ಮೈಲಿ ದೂರ ಆಗುತ್ತದೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಎ. ಭೀಮಪ್ಪನಾಯಕರು.—ಅದಕ್ಕೂ ಇದಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ತಾವು ಡೀಪಿಯೇಟ್ ಮಾಡುವ ಲೈನು ಹೊಸ ಲೈನು ಆಗುತ್ತದೆ ಎಂಬುದು ಗೊತ್ತೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಜ್ಞಾಪಕ ಇಟ್ಟು ಕೊಳ್ಳುತ್ತೇನೆ. ಪರೀಕ್ಷೆ ಮಾಡುತ್ತೇನೆ.

Electrification of Somanahalli and other Villages in Uttarahalli Hobli.

Q.—180. Sri A. V. NARASIMHA REDDY (Bangalore South).—

Will the Government be pleased to state:—

(*a*) whether at any time the proposal of electrifying Somanahalli and other thirty villages in Uttarahalli Hobli, Bangalore South Taluk, was contemplated;

(*b*) the year in which this work was estimated and the estimated cost;

(*c*) whether steps have been taken in implementing this proposal?

A.—Sri T. SIDDALINGAIYA (Minister for Industries).—

(*a*) Application for Electrification of Somanahalli Village was received

(SRI T. SIDDALINGIAH).

through the Deputy Commissioner, Bangalore District, during November 1946. Electrification of 13 surrounding villages (Jacksandra, Keerangere, Thurukarahosalli and Balechannavolse, Padavanagere and Puradadoddi, Agara, Doddasadenhalli, Malligametlu, Byregowdanhalli, Channegowdanadoddi, Chickmaralavadi and Doddamaralavadi was taken up for consideration at the initiative of the Department itself during February 1950.

(b) The estimate for electrification of Somanahalli amounting to Rs. 95,700 was prepared during September 1948.

The estimate for electrification of Maralavadi and other villages amounting to Rs. 3,00,000 was prepared during March 1950.

(c) The estimate for elec rification of Somanhalli has been deferred.

The estimate for electrification of Dodmaralavadi and other villages has been deferred.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಸೋಮನ ಹಳ್ಳಿಯ ಜನರು 1936ನೇ ಇಸವಿಯಲ್ಲಿ ತಮ್ಮ ಗ್ರಾಮ ಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಅರ್ಜಿ ಕೊಟ್ಟಿದ್ದು ತಮ್ಮ ಗಮನದಲ್ಲಿದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—1936ನೇ ಇಸವಿಯಲ್ಲಿ ಕೇಳಿರುವುದು ನಮ್ಮ ಗಮನದಲ್ಲಿ ಇಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಸರ್ಕಾರದ ವರು ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ವಿಚಾರದಲ್ಲಿ ಯಾವುದಾದರೂ ಒಂದು ಖಚಿತವಾದ ನೀತಿ ಇದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೀತಿ ಇದೆ. ಅದನ್ನು ಕೇಳಿದರೆ ಎಲ್ಲರಿಗೂ ಅನುಕೂಲವಾಗುತ್ತದೆ ಎಂದು ಕಾಣುತ್ತದೆ. ಪ್ರತಿಯೊಂದು ಹಳ್ಳಿಗೂ ವಿದ್ಯುಚ್ಛಕ್ತಿ ಕೊಡಬೇಕು ಎಂಬುದು ಸರ್ಕಾರದ ತತ್ವವಾಗಿದೆ. ಹಾಗೆ ಕೊಡುವಾಗ ಯಾವ ರೀತಿ ಕೊಡಬೇಕು, ಯಾವ ಕ್ರಮವನ್ನು ಅನುಸರಿಸಬೇಕು ಎಂಬುದಕ್ಕೆ ನಾವು ಕೆಲವು ಪರತ್ತುಗಳನ್ನು ಹಾಕಿಕೊಂಡು ತೀರ್ಮಾನ ಮಾಡುತ್ತೇವೆ. ಒಂದು ಲೈನ್ ಎಳೆಯಬೇಕಾಗಿದ್ದರೆ ಎಷ್ಟು ಖರ್ಚಾಗುತ್ತದೆಯೋ ಆ ಖರ್ಚಿನ ಮೇಲೆ ಸ್ವಲ್ಪ ಬಡ್ಡಿ ಬರಬೇಕು. ಡಿಪ್ರಿಸಿಯೇಷನ್ ಮತ್ತು ಮೇಂಟಿನೆನ್ಸ್‌ಗೆ ಪ್ರೊವೈಡ್ ಮಾಡಬೇಕು. ಇದೆಲ್ಲಾ ರೆಕ್ಕ ಹಾಕಿದರೆ ವರ್ಷಕ್ಕೆ 10·91 ರಿಟರ್ನ್ ಬರಬೇಕು. ಹಾಗೆ ಬರದೇ ಇದ್ದರೆ ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್‌ಗೆ ಸರಿಯಾದ ರಿಟರ್ನ್ ಬರುವುದಿಲ್ಲ. ಆ ಲೈನು ಕೊಂಚ ದಿನ ಆದಮೇಲೆ ಇಟ್ಟುಕೊಳ್ಳಬಹುದೇ ಇಲ್ಲವೆ, ಅಥವಾ ಆದರಿಂದ ನಷ್ಟವಾಗುತ್ತದೆಯೇ, ಬೇರೆಯಾವುದಾದರೂ ತೊಂದರೆ ಬರುತ್ತದೆಯೋ, ರಿಟರ್ನ್ ಎಷ್ಟು ಬರಬಹುದು ಎಂಬ ಎಲ್ಲಾ ದೃಷ್ಟಿಯನ್ನೂ ಸರ್ಕಾರದವರು ಮನಸ್ಸಿನಲ್ಲಿಟ್ಟುಕೊಂಡಿದ್ದಾರೆ. ಆದರೂ ಇರಿಗೇಷನ್ ಪಂಪು ಗಳಿಗೆ ಕೊಡುವಾಗ ಬಹಳ ರಿಯಾಯಿತಿ ತೋರಿಸಿಕೊಡ ಬೇಕೆಂದು ಮಾಡಿಕೊಂಡಿದ್ದಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಇದೇ ಸರ್ಕಾರದ ಉದ್ದೇಶ.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಸೋಮನಹಳ್ಳಿ ವಗ್ಗೆರೆ ಗ್ರಾಮಗಳಿಂದ ಸರ್ಕಾರದವರು ಎರೀಕ್ಷಿಸುವಷ್ಟು ರಿಟರ್ನ್ ಬರುವುದಿಲ್ಲ ಎಂಬ ಅನುಮಾನ ಇದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದು ಅನುಮಾನ ವಾಗಿಯೇ ಇದೆ. 3% ರಿಟರ್ನ್ ಬರಬಹುದು. ಅದೂ ಕೂಡ 1948ನೇ ಇಸವಿಯಲ್ಲಿ ಮಾಡಿದ ಅಂದಾಜು. ಅದರ ಪ್ರಕಾರ 95,700 ರೂಪಾಯಿ ಆಗುತ್ತದೆ. ಈಗ 5% ಮೆಟೀರಿಯಲ್ ಕಾಸ್ಟ್ ಛಾಸ್ತಿಯಾಗುತ್ತದೆ. ಆಗಿನ ರೆಕ್ಕದ ಪ್ರಕಾರ ರಿಟರ್ನ್ 3% ಇತ್ತು, ಈಗ 2% ಆಗುತ್ತದೆ

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಸೋಮನ ಹಳ್ಳಿ ವಗ್ಗೆರೆ ಗ್ರಾಮಗಳಲ್ಲಿ ಸುಮಾರು 35 ಬಾವಿ ಗಳಿವೆ. ಇರಿಗೇಷನ್ ಪಂಪುಗಳಿಗೋಸ್ಕರ ವಿದ್ಯುಚ್ಛಕ್ತಿ ಬೇಕೆಂದು ಕೇಳಿರಲಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಕೇಳಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಹಾಗಾದರೆ ಹೆಚ್ಚು ಆಹಾರ ಬೆಳೆ ಬೆಳೆಯುವುದಕ್ಕೆ ಉತ್ತೇಜನ ಕೊಡುವುದಕ್ಕೂ ಮತ್ತು ಗ್ರಾಮಗಳಿಗೆ ವಿದ್ಯುಚ್ಛಕ್ತಿ, ದೀಪ ಗಳನ್ನು ಒದಗಿಸುವುದಕ್ಕೂ ವಿದ್ಯುಚ್ಛಕ್ತಿಯನ್ನು ಅದಷ್ಟು ಬೇಗ ತಾವು ಕೊಡಬೇಕಾದ್ದುಧರ್ಮ ಎಂದು ತೋರುವುದಿಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ತಾವು ಹೇಳಿದ ಘನೋದ್ದೇಶ ಸರ್ಕಾರದವರ ಮನಸ್ಸಿನಲ್ಲಿದೆ ಎಂದು ಆಗಲೇ ಸ್ಪಷ್ಟಪಡಿಸಿದ್ದೇನೆ. ಬಡ್ಜೆಟ್‌ನಲ್ಲಿ ಗ್ರಾಂಟು ಎಷ್ಟಿದೆ ಅದನ್ನು ನೋಡಿಕೊಂಡು ನಾವು ಕೆಲಸವನ್ನು ಕೈಕೊಳ್ಳಬೇಕಾಗಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಸರ್ಕಾರದ ವರು ವಿದ್ಯುಚ್ಛಕ್ತಿ ಕೊಡತಕ್ಕ ಸಂದರ್ಭಗಳಲ್ಲಿ ಒಂದು ಗ್ರಾಮದ ಅಂದಾಜು ತಯಾರಿಸಿ ಆ ಗ್ರಾಮಕ್ಕೆ ಕೊಡದೇ ಬೇರೆ ಗ್ರಾಮಗಳಿಗೆ ಕೊಡುವ ಸಂದರ್ಭ ಇದೆಯೇ?

Mr. SPEAKER.—That does not arise.

ಶ್ರೀ ಎಸ್. ಕರಿಯಪ್ಪನವರು (ವಿರೂಪಾಕ್ಷಪುರ).—ದೊಡ್ಡಮರಳವಾಡಿ, ಸಾದೇನಹಳ್ಳಿಗಳಿಗೆ ವಿದ್ಯುಚ್ಛಕ್ತಿ, ಒದಗಿಸುವುದನ್ನು ಡ್ರೈವರ್ಟ್ ಮಾಡಿದ ಕಾರಣವೇನು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಗ ಕೆಲವು ಷರತ್ತುಗಳನ್ನು ಹಾಕಿಕೊಂಡು ವಿದ್ಯುಚ್ಛಕ್ತಿ ಕೊಡಬೇಕಾಗಿದೆ. ಆ ಷರತ್ತುಗಳು ನೆರವೇರದೇ ಹೋದರೆ ಮತ್ತು ಬಡ್ಜೆಟ್ ಗ್ರಾಂಟು ಇಲ್ಲದೇ ಇದ್ದರೆ ಡ್ರೈವರ್ಟ್ ಮಾಡಬೇಕಾದ ಪ್ರಮೇಯ ಬರುತ್ತದೆ.

ಶ್ರೀ ಎಸ್. ಕರಿಯಪ್ಪನವರು.—ಅವರುಗಳೆಲ್ಲಾ ಕೇಳಿರುವುದು ಇರಿಗೇಷನ್ ಪಂಪ್‌ಗೆ ಅಲ್ಲವೆ?

ಶ್ರೀ ಟಿ ಸಿದ್ದಲಿಂಗಯ್ಯನವರು.—'For electrification' ಅಂತ ಸ್ಪಷ್ಟವಾಗಿದೆ.

ಶ್ರೀ ಎಸ್. ಕರಿಯಪ್ಪನವರು.—ಸುಮಾರು 30-40 ಪಂಪುಗಳಿಗೆ ಪವರ್ ಕೇಳಿಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನಾನು ಆಗಲೇ ಹೇಳಿದೆ. ಅವರು ಕೇಳಿರುವುದು ಪಂಪು, ದೀಪ, ಕೈಗಾರಿಕೆಗಳು ಎಲ್ಲಕ್ಕೂ ಅನ್ವಯವಾಗುತ್ತದೆ.

ಶ್ರೀ ಎಸ್. ಕರಿಯಪ್ಪನವರು.—ಆಹಾರ ಅಭಾವ ವಿರತಕ್ಕ ಕಾಲದಲ್ಲಿ ಇರಿಗೇಷನ್ ಪಂಪುಗಳಿಗೆ ವಿದ್ಯುಚ್ಛಕ್ತಿ ತೆಗೆದುಕೊಂಡು ವ್ಯವಸಾಯ ಅಭಿವೃದ್ಧಿ ಮಾಡುತ್ತೇವೆ ಪವರ್ ಕೊಡಿ ಎಂದು ಕೇಳಿದರೂ ಕೊಡದಿದ್ದರೆ ವ್ಯವಸಾಯಾಭಿವೃದ್ಧಿಗೆ ತೊಂದರೆಯಾಗುವುದಿಲ್ಲವೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆಗುತ್ತದೆ. ಬಡ್ಜೆಟ್ ಗ್ರಾಂಟ್ ಮಾಡಿಬಿಟ್ಟರೆ ಸಾಕು. ಅದಷ್ಟು ಬೇಗ ಕೊಡಲಾಗುತ್ತದೆ.